## **ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ : ಕೇಂದ್ರ ಕಛೇರಿ : ಬೆಂಗಳೂರು.**

ಸಂಖ್ಯೆ: ಬೆಮಸಾಸಂ/ಕೇಕ/ನೇಮಕ/1414 /2010-11 ದಿನಾಂಕ 24/05/2010

**ಪ್ರಕಟಣೆ**

**ವಿಷಯ: ಜಾಹೀರಾತು ಸಂಖ್ಯೆ 3/2010 ದಿನಾಂಕ 12/04/2010 ರನ್ವಯ ತಾಂತ್ರಿಕ-ಬಿ ಹುದ್ದೆಗೆ 1: 5 ರ ಪ್ರಮಾಣದ ಅರ್ಹತಾಪಟ್ಟಿ ಪ್ರಕಟಿಸಿರುವ ಬಗ್ಗೆ**

***

ಜಾಹೀರಾತು ಸಂಖ್ಯೆ.3/2010 ದಿನಾಂಕ: 12/04/2010ರನ್ವಯ ತಾಂತ್ರಿಕ-ಬಿ ಹುದ್ದೆಗೆ ಅಭ್ಯರ್ಥಿಗಳು ಆನ್ ಲೈನ್ ಅರ್ಜಿಯಲ್ಲಿ ನಮೂದಿಸಿದ್ದ ವಿವರಗಳ ಆಧಾರದ ಮೇರೆಗೆ ಮೂಲ ದಾಖಲಾತಿಗಳ ಮತ್ತು ದೇಹದಾರ್ಢ್ಯತೆ ಪರಿಶೀಲನೆಗೆ 1 : 5 ರ ಪ್ರಮಾಣದಲ್ಲಿ ಸಂಭವನೀಯ ಅರ್ಹತಾ ಪಟ್ಟಿಯನ್ನು ಪ್ರಕಟಿಸಲಾಗಿದೆ. ಅರ್ಹತಾ ಪಟ್ಟಿಯಲ್ಲಿ ಸೇರ್ಪಡೆಗೊಂಡಿರುವ ಅಭ್ಯರ್ಥಿಗಳ ವಿವರಗಳನ್ನು ಸಂಸ್ಥೆಯ ವೆಬ್‌ಸೈಟ್ www.bmtccareers.com ನಲ್ಲಿ ಮತ್ತು ಸಂಸ್ಥೆಯ ಸೂಚನಾಫಲಕದಲ್ಲಿ ಬಿತ್ತರಿಸಲಾಗಿದೆ. ಅರ್ಹತಾ ಪಟ್ಟಿಯಲ್ಲಿ ಸೇರ್ಪಡೆಗೊಂಡಿರುವ ಅಭ್ಯರ್ಥಿಗಳು ಮೂಲ ದಾಖಲಾತಿಗಳ ಮತ್ತು ದೇಹದಾರ್ಢ್ಯತೆ ಪರಿಶೀಲನೆಗೆ ನಿಗಧಿಪಡಿಸಲಾಗಿರುವ ದಿನಾಂಕವನ್ನೊಳಗೊಂಡ ಕರೆಪತ್ರವನ್ನು ವೆಬ್‌ಸೈಟ್‌ನಿಂದ ಮುದ್ರಿಸಿಕೊಂಡು ಅಂತರ್‌ಜಾಲ ಕರೆಪತ್ರದಲ್ಲಿ ಸೂಚಿಸಲಾದ ದಿನಾಂಕದಂದು ತಪ್ಪದೇ ಪರಿಶೀಲನೆಗೆ ಹಾಜರಾಗಲು ಸೂಚಿಸಿದೆ. ಪರಿಶೀಲನೆಯಲ್ಲಿ ಅರ್ಹಗೊಂಡ ಅಭ್ಯರ್ಥಿಗಳನ್ನು ಅದೇ ದಿವಸ ಅಥವಾ ಮರುದಿವಸ ಮೌಖಿಕ ಸಂದರ್ಶನಕ್ಕೆ ಒಳಪಡಿಸಲಾಗುವುದು.

**ಅರ್ಹತಾ ಪಟ್ಟಿಯಲ್ಲಿ ಸೇರ್ಪಡೆಗೊಂಡಿರುವ ಅಭ್ಯರ್ಥಿಗಳ ಕೊನೆಯ ಶೇಕಡವಾರು ಅಂಕಗಳು ಮತ್ತು ಹುಟ್ಟಿದ ದಿನಾಂಕ ಈ ಕೆಳಕಂಡಂತಿರುತ್ತದೆ.**

| | ಪ. ಜಾತಿ | ಪ.ಪಂಗಡ | ವರ್ಗ-1 | 2ಎ | 2ಬಿ | 3ಎ | 3ಬಿ | ಸಾ.ವರ್ಗ |
|---|---|---|---|---|---|---|---|---|
| ಸಾಮಾನ್ಯ | 81.28 | 82.14 | 82.42 | 82.28 | 82.34 | 82.28 | 83.28 | 83.57 |
| ಹು.ದಿನಾಂಕ | 16-10-88 | 02-06-88 | 31-07-91 | 31-07-90 | 22-07-91 | 07-07-85 | 31-07-91 | 01-06-88 |
| ಮಹಿಳಾ | 36.32 | 63.85 | 60.57 | 49.45 | 58.85 | 68.28 | 55.93 | 72.00 |
| ಹು.ದಿನಾಂಕ | 28-04-86 | 15-06-79 | 15-02-85 | 04-06-74 | 31-05-85 | 01-06-88 | 08-06-86 | 29-01-86 |
| ಗ್ರಾ.ಅಭ್ಯರ್ಥಿ | 81.71 | 82.42 | 82.57 | 82.71 | 82.42 | 82.71 | 83.28 | 84.14 |
| ಹು.ದಿನಾಂಕ | 02-09-91 | 14-07-87 | 10-07-84 | 22-09-90 | 10-01-91 | 01-05-88 | 20-07-87 | 01-08-87 |
| ಕನ್ನಡ ಮಾಧ್ಯಮ | 82.85 | 83.00 | 83.14 | 83.00 | 83.14 | 82.71 | 83.42 | 85.14 |
| ಹು.ದಿನಾಂಕ | 05-06-87 | 01-08-85 | 02-07-88 | 01-06-86 | 01-06-86 | 26-07-91 | 15-06-86 | 25-06-90 |
| ಯೋ.ನಿರಾಶ್ರಿತ | 76.85 | 79.42 | 79.14 | 80.00 | 78.57 | 80.00 | 80.85 | 81.28 |
| ಹು.ದಿನಾಂಕ | 12-12-85 | 17-08-79 | 15-05-89 | 25-07-86 | 01-06-87 | 10-06-87 | 22-07-90 | 31-01-90 |
| ಮಾಜಿ ಸೈನಿಕ | - | - | - | - | - | - | - | 48.28 |
| ಹು.ದಿನಾಂಕ | - | - | - | - | - | - | - | 01-04-72 |

ಈ ಸಂಭವನೀಯ ಅರ್ಹತಾ ಪಟ್ಟಿಯಲ್ಲಿನ ಗುಂಪುವಾರು ಹಾಗೂ ಶೇಕಡಾವಾರು ಅಂಕಗಳಿಗಿಂತ ಹೆಚ್ಚಿನ ಅಂಕಗಳಿಸಿದ್ದು ಅರ್ಹತಾ ಪಟ್ಟಿಯಲ್ಲಿ ಸೇರ್ಪಡೆಗೊಂಡಿಲ್ಲದ ಅಭ್ಯರ್ಥಿಗಳು ಸಂಬಂಧಪಟ್ಟ ಮೂಲದಾಖಲಾತಿಗಳೊಂದಿಗೆ **ಅಧ್ಯಕ್ಷರು, ತಾಂತ್ರಿಕ-ಬಿ ಆಯ್ಕೆ ಸಮಿತಿ, ಬೆ.ಮ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಶಾಂತಿನಗರ ಬೆಂಗಳೂರು-27** ಇಲ್ಲಿ ದಿನಾಂಕ 15/06/2010ರೊಳಗಾಗಿ ಮೂಲದಾಖಲಾತಿಗಳ ಸಮೇತ ಖುದ್ದಾಗಿ ಹಾಜರಾಗಿ ಲಿಖಿತ ಆಕ್ಷೇಪಣೆ ಸಲ್ಲಿಸುವುದು. ದಿನಾಂಕ 15/06/2010 ರ ನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಮೂಲ ದಾಖಲಾತಿಗಳ ಮತ್ತು ದೇಹದಾರ್ಢ್ಯತೆ ಪರಿಶೀಲನೆಯನ್ನು ದಿನಾಂಕ: 31/05/2010 ರಿಂದ 24/06/2010 ರವರೆಗೆ ನಡೆಸಲಾಗುವುದು.

- ಸಹಿ -

ಅಧ್ಯಕ್ಷರು, ಆಯ್ಕೆಸಮಿತಿ